# ಬಸವಣ್ಣನವರ ಕೆಲವು ವಚನಗಳ ಇನ್ನೊಂದು ಓದು

**ಅಮರೇಂದ್ರ ಶೆಟ್ಟಿ ಆರ್.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

**DOI: https://doi.org/10.5281/zenodo.18116385**

## ABSTRACT:

ಪ್ರಸ್ತುತ ಲೇಖನವು ಬಸವಣ್ಣನವರ ಆಯ್ದ ವಚನಗಳನ್ನು ಹೊಸ ದೃಷ್ಟಿಕೋನದಿಂದ ವಿಶ್ಲೇಷಿಸುವ ಪ್ರಯತ್ನವಾಗಿದೆ. ಲೇಖಕರು ಇಲ್ಲಿ ಮುಖ್ಯವಾಗಿ ಭಕ್ತನ ಆತ್ಮವಿಮರ್ಶೆ, ಸಾಮಾಜಿಕ ಮತ್ತು ಆರ್ಥಿಕ ವರ್ಗಗಳ ನಡುವಿನ ಸಂಘರ್ಷ ಹಾಗೂ ಅಧ್ಯಾತ್ಮದ ಹಾದಿಯಲ್ಲಿ ಎದುರಾಗುವ ಮಾನಸಿಕ ತುಮುಲಗಳನ್ನು ಚರ್ಚಿಸಿದ್ದಾರೆ. 'ದೇಹವೇ ದೇಗುಲ' ಎಂಬ ಪರಿಕಲ್ಪನೆಯ ಮೂಲಕ ಶ್ರಮಿಕನ ಚಲನಶೀಲತೆ (ಜಂಗಮ) ಮತ್ತು ಶ್ರೀಮಂತಿಕೆಯ ಜಡತ್ವದ (ಸ್ಥಾವರ) ವ್ಯತ್ಯಾಸವನ್ನು ಇಲ್ಲಿ ವಿವರಿಸಲಾಗಿದೆ. ಬಸವಣ್ಣನವರ ವಚನಗಳಲ್ಲಿನ ಆತಂಕ, ವಿಷಾದ ಮತ್ತು ಶರಣರ ಸಾಂಗತ್ಯದ ಹಂಬಲವನ್ನು ಲೇಖಕರು ಕೇವಲ ಭಕ್ತಿಯ ನೆಲೆಯಲ್ಲಷ್ಟೇ ಅಲ್ಲದೆ, ವೈಯಕ್ತಿಕ ಮತ್ತು ಲೌಕಿಕ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿಯೂ ಅರ್ಥೈಸಿದ್ದಾರೆ.

## KEYWORDS:

ಬಸವಣ್ಣ, ವಚನ ವಿಶ್ಲೇಷಣೆ, ಸ್ಥಾವರ-ಜಂಗಮ, ಆತ್ಮಶೋಧ, ಸಾಮಾಜಿಕ ನೈತಿಕತೆ.

ವಚನಗಳೆಂದರೆ ಅರ್ಥಗಳನ್ನು ಬಿಚ್ಚಿಡುತ್ತಲೇ ಹೋಗುವ, ಹೊಸ ಹೊಳಹುಗಳನ್ನು ತೆರೆಯುತ್ತಲೇ ಇರುವ ವಿಶಿಷ್ಟ ಅಭಿವ್ಯಕ್ತಿಗಳು. ಈಗಾಗಲೇ ವಚನಗಳನ್ನು ಅನೇಕರು ಅನೇಕ ನೆಲೆಗಳಲ್ಲಿ ಅರ್ಥೈಸುವ ಪ್ರಯತ್ನವನ್ನು ಮಾಡಿದ್ದಾರೆ. ಎಲ್ಲರ ಎಲ್ಲ ಕಾಲದ ಓದಿಗೂ ಮುಕ್ತವಾಗಿ ಒಡ್ಡಿಕೊಳ್ಳುವ ಗುಣವೇ ವಚನಗಳ ಮೂಲಧಾತು ಆಗಿರುವುದರಿಂದ ಅವು ನನಗೂ ಒಂದಿಷ್ಟು ಅರ್ಥಗಳನ್ನು ಬಿಟ್ಟುಕೊಡುವ ನಂಬಿಕೆಯಿದೆ. ಆದ್ದರಿಂದ ನಾನೂ ಕೂಡ ಬಸವಣ್ಣನ ವಚನಗಳಿಗೆ ಎದುರಾಗುವ, ಅವುಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ. ಇಲ್ಲಿನ ವಚನಗಳ ಆಯ್ಕೆಯಲ್ಲಿ ಯಾವ ಲೆಕ್ಕಾಚಾರವೂ ಇಲ್ಲ. ನನಗೆ ಬೇಕೆನ್ನಿಸಿದ ವಚನವನ್ನು ಕೈಗೆತ್ತಿಕೊಂಡು ವಿವರಿಸಿಕೊಂಡಿದ್ದೇನೆ.

ಭಕ್ತನು ತನ್ನ ದೇಹವನ್ನು ದೇಗುಲವನ್ನಾಗಿ, ಶಿವನನ್ನು ಅಲ್ಲಿನ ನಿವಾಸಿಯನ್ನಾಗಿ ಭಾವಿಸುವ ವಚನವೊಂದನ್ನು ಮೊದಲಿಗೆ ಗಮನಿಸುತ್ತೇನೆ.

**ಉಳ್ಳವರು ಶಿವಾಲಯವ**
**ಮಾಡುವರು**
**ನಾನೇನು ಮಾಡಲಿ**
**ಬಡವನಯ್ಯಾ?**

**ಎನ್ನ ಕಾಲೇ ಕಂಬ**
**ದೇಹವೇ ದೇಗುಲ**
**ಶಿರವೇ ಹೊನ್ನ ಕಳಸವಯ್ಯಾ**
**ಕೂಡಲ ಸಂಗಮದೇವ ಕೇಳಯ್ಯಾ**
**ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ !**

ಈ ವಚನದ ವೈಶಿಷ್ಟ್ಯವನ್ನು ಮೂರು ಹಂತಗಳಲ್ಲಿ ಗಮನಿಸಿಕೊಳ್ಳಲು ಯತ್ನಿಸುತ್ತೇನೆ.

ಇದರ ಆರಂಭದ ಸಾಲಿನಲ್ಲಿಯೇ ಹೇಳಲಾಗಿರುವಂತೆ ಶಿವಾಲಯ ಉಳ್ಳವನದು. ಏಕೆಂದರೆ ಅದರ ನಿರ್ಮಾಣಕ್ಕೆ ಅವನು ಹಣವನ್ನು ವ್ಯಯಿಸಿದ್ದಾನೆ. ಆದರೆ ಈಗ ಶಿವಾಲಯದೆದುರು ಧುತ್ತೆಂದು ಒಬ್ಬ ಬಡವ ಕಾಣಿಸಿಕೊಳ್ಳುತ್ತಾನೆ. ಅವನು ಸೂಚ್ಯವಾಗಿ ಹೇಳುವಂತೆ ಶಿವಾಲಯವನ್ನು 'ಮಾಡಿದವನು' ಶ್ರೀಮಂತ ಹೌದು. ಆದರೆ ಅದನ್ನು 'ಕಟ್ಟಿದವನು' ತಾನು. ಆದರೆ ಇಲ್ಲಿ ನೋಡಿದರೆ ಉಳ್ಳವನ ಹಕ್ಕುಸ್ವಾಮ್ಯದ ಮುದ್ರೆ ದೇಗುಲದ ಮೇಲಿದೆ. ತಾನು ಬಸಿದ ಬೆವರಿನ ಗುರುತೇ ಅಲ್ಲಿಲ್ಲ. ಅದು ಬಡವನಿಗೆ ಮಹಾನ್ ದಿಗ್ಭ್ರಮೆಯ ಸ್ಥಿತಿ.

ಅವನೀಗ ದಿಗ್ಭ್ರಮೆಯಿಂದ ಚೇತರಿಸಿಕೊಂಡಿದ್ದಾನೆ. ಅವನಿಗೆ ತಾನು ಕಟ್ಟಿದ ಆ ದೇಗುಲ ಶಾಶ್ವತವಲ್ಲ, ಅದೊಂದು ಬರಡು ನಿರ್ಮಿತಿ ಎನ್ನುವ ಅರಿವು ಮೂಡಿದೆ. ನಿರ್ಜೀವ ಕಟ್ಟಡದಲ್ಲಿ ಕುಳಿತ ದೈವವನ್ನು ಹೊರತರಬೇಕು ಎನ್ನುವ ಕಾಳಜಿ ಕಾಣಿಸಿಕೊಂಡಿದೆ. ಹೊರಬಂದ ದೈವಕ್ಕೆ ಒಂದು ನೆಲೆ ಒದಗಿಸಬೇಕು ಎನ್ನುವ ಎಚ್ಚರವೂ ಹುಟ್ಟಿದೆ. ಆದರೆ ಈಗ ದೇಗುಲ ಅವನ ಆಯ್ಕೆಯಲ್ಲ. ದೇಗುಲ ಮೂಲದ ಅವಗಣನೆ ಹಾಗೂ ಕ್ರೌರ್ಯವನ್ನು ಅವನು ಈಗಾಗಲೇ ಅನುಭವಿಸಿದ್ದಾನೆ. ಆದರೂ ತಕ್ಷಣಕ್ಕೆ ಒಂದು ಪರ್ಯಾಯ ಅವನಿಗೆ ಹೊಳೆದಿದೆ. ಆ ಪರ್ಯಾಯವೆಂದರೆ ಅವನ ದೇಹವೇ. ಅವನು ತನ್ನ ದೇಹವನ್ನೇ ದೇಗುಲವೆಂದು ಪ್ರತಿಪಾದಿಸಿ ಅಲ್ಲಿಗೆ ದೇವನನ್ನು ಕರೆಯುತ್ತಾನೆ. ಅದರ ಆಕಾರದ ಚಿತ್ರಣವನ್ನು ದೇವರ ಮುಂದಿಡುತ್ತಾನೆ. ತನ್ನ ಕಾಲನ್ನು ಕಂಬ ಎನ್ನುತ್ತಾನೆ. ತನ್ನಿಡೀ ದೇಹವನ್ನು ದೇಗುಲವೆನ್ನುತ್ತಾನೆ. ತಲೆಯನ್ನು ಹೊನ್ನ ಕಳಶ ಎನ್ನುತ್ತಾನೆ. ಈ ಭಕ್ತ ಎಂತವನೆಂದರೆ ತಕ್ಷಣ ತನ್ನ ದೇಹವನ್ನು ದೈವಕ್ಕೆ ಒಪ್ಪಿಸಿಕೊಳ್ಳಲು ಸಿದ್ಧನಾಗಿದ್ದಾನೆ. ಅವನಿಗೆ ಅದು ತುಂಬಾ ಸುಲಭವಿದ್ದಂತಿದೆ. ಏಕೆಂದರೆ ಅವನ ನಡೆ ಮತ್ತು ನಿಲುವುಗಳನ್ನು ಗಮನಿಸಿದರೆ ಅವನು ದೇಹ ಮೋಹಿಯಲ್ಲ. ಅಸಹಜ ಭೋಗಿಯೂ ಅಲ್ಲ. ಹಾಗಾಗಿ ಅವನಿಗೆ ತನ್ನ ದೇಹವನ್ನೇ ದೇಗುಲವಾಗಿಸಿಕೊಳ್ಳಲು ಪೂರ್ವ ತಯಾರಿಗಳ ಅವಶ್ಯಕತೆಯೂ ಇಲ್ಲ.

ಇಲ್ಲಿನ ಶ್ರೀಮಂತನು ದೇಗುಲವನ್ನು ಕಟ್ಟಲಾರ. ದೇಹವನ್ನು ದೇಗುಲವಾಗಿಸಿಕೊಳ್ಳಲೂ ಅವನಿಂದಾಗದು. ಆದರೆ ಅಂತಹ ಸಾಧ್ಯತೆಗಳಿರುವುದು ಬಡವನಿಗೆ. ಯಾಕೆಂದರೆ, ಬಡವನ ವ್ಯಕ್ತಿತ್ವದಲ್ಲಿ ಒಡ್ಡಿಕೊಳ್ಳುವ, ಚಲನಶೀಲವಾಗುವ ಅದ್ಭುತ ಗುಣವಿದೆ. ಬಹುಶಃ ಶ್ರೀಮಂತನ ಜಡತೆಯನ್ನು ಸ್ಥಾವರಕ್ಕೆ, ಬಡವನ ಚಲನಶೀಲತೆಯನ್ನು ಜಂಗಮಕ್ಕೆ ಬಸವಣ್ಣ ನಿದರ್ಶನವಾಗಿ ನಮ್ಮ

ಮುಂದಿಡುತ್ತಿರಬಹುದು. ಬಸವಣ್ಣನ 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎನ್ನುವ ಮಾತು ಮುಖ್ಯವಾಗುವುದು ಹೀಗೆ. ಇದು ಕಾಯಕವನ್ನೇ ಕೈಲಾಸವಾಗಿಸಿಕೊಂಡ ಶ್ರಮಿಕನ ಗೆಲುವು ಎನ್ನುವುದು ಸೂಕ್ತ.

ಇನ್ನೊಂದು ಕುತೂಹಲಕರ ವಚನವನ್ನು ಪರಿಶೀಲಿಸಬಹುದು:

**ವಚನದಲ್ಲಿ ನಾಮಾಮೃತ ತುಂಬಿ**
**ನಯನದಲ್ಲಿ ನಿಮ್ಮ ಮೂರುತಿ ತುಂಬಿ**
**ಮನದಲ್ಲಿ ನಿಮ್ಮ ನೆನಹು ತುಂಬಿ**
**ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ**
**ಕೂಡಲ ಸಂಗಮ ದೇವಾ**
**ನಿಮ್ಮ ಚರಣ ಕಮಲದೊಳಗಾನು ತುಂಬಿ**

ಮೇಲ್ನೋಟಕ್ಕೆ ಈ ವಚನವು ಏಕಾಗ್ರ ಭಕ್ತಿಯ ಉತ್ಕಟ ನಿವೇದನೆಯಂತೆ ಕಾಣುತ್ತದೆ. ಹಾಗೆಯೇ ಭಕ್ತನ ತನು ಮನಗಳನ್ನು ಆರಾಧ್ಯ ದೈವವು ಆವರಿಸಿಕೊಂಡುಬಿಟ್ಟಿರುವಂತೆಯೂ, ಭಕ್ತನು ತಡೆಹಿಡಿಯಲಾಗದ ಸಂಭ್ರಮವನ್ನು ಪ್ರಕಟಿಸುತ್ತಿರುವಂತೆಯೂ, ಅಂತಿಮವಾಗಿ ದೈವದ ಪಾದಕಮಲದಲ್ಲಿ ದುಂಬಿಯಂತೆ ಸಮರ್ಪಿಸಿಕೊಂಡಂತೆಯೂ ಇದನ್ನು ವ್ಯಾಖ್ಯಾನಿಸಲು ಸಾಧ್ಯವಿದೆ. ಇಲ್ಲಿಯ ತನಕ ಹೀಗೆಯೇ ಆಗಿರುವಂತಿದೆ.

ಇಲ್ಲಿ ಮೊದಲ ನಾಲ್ಕು ಸಾಲುಗಳ ಕೊನೆಯಲ್ಲಿ ಬರುವ 'ತುಂಬಿ' ಎನ್ನುವುದು ಕ್ರಿಯಾಪದ ಹಾಗೂ ಕೊನೆಯ ಸಾಲಿನಲ್ಲಿ ಕಾಣಿಸಿಕೊಳ್ಳುವ 'ತುಂಬಿ' ಎನ್ನುವುದು 'ದುಂಬಿ' ಎಂಬ ನಾಮಪದ. ಮೊದಲನೆಯವು ಪೂರ್ಣಾವೃತ ಸ್ಥಿತಿಯನ್ನು ಹೇಳುತ್ತಿದ್ದರೆ, ಕೊನೆಯದು ಅರ್ಪಣಾಸ್ಥಿತಿಯ ಧನ್ಯತೆಯನ್ನು ಪ್ರತಿಪಾದಿಸುತ್ತದೆ ಎನ್ನುವ ತಿಳುವಳಿಕೆ ಇಂತಹ ವ್ಯಾಖ್ಯಾನಗಳ ಹಿಂದಿನ ತರ್ಕವಾಗಿದ್ದಿರಬಹುದು. ಇದನ್ನು ಪೂರ್ತಿ ನಿರಾಕರಿಸಲು ಸಾಧ್ಯವಿಲ್ಲವಾದರೂ, ಇನ್ನೂ ಒಂದು ಬಗೆಯ ಗ್ರಹಿಕೆಗೆ ಅವಕಾಶವಿದೆ. ಇಲ್ಲಿನ ಎಲ್ಲ ತುಂಬಿಗಳೂ 'ದುಂಬಿಗಳೇ' ಆಗಿರುವಂತಿವೆ. ಏಕೆಂದರೆ, ಬರಿಯೆ ಸುಳಿದು ಸರಿದು ಹೋಗಿಬಿಡುವ ತನ್ನ ಆರಾಧ್ಯ ದೈವದ ಬಗೆಗೆ ಹಾಗೂ ಅದಕ್ಕೆ ಕಾರಣವಾದ ತನ್ನ ಏಕಾಗ್ರರಾಹಿತ್ಯ ಮನಸ್ಥಿತಿಯ ಬಗೆಗೆ ಬಸವಣ್ಣನಲ್ಲಿ ದಟ್ಟ ವಿಷಾದವಿದೆ. 'ನಿಮ್ಮ ಚರಣ ಕಮಲದೊಳಗಾನು ತುಂಬಿ' ಎನ್ನುವಲ್ಲಿಯೂ ತಾನು ಈಗಾಗಲೇ ನಿನ್ನ ಚರಣಕಮಲಗಳಲ್ಲಿ ಶರಣಾಗಿದ್ದೇನೆ ಎನ್ನುವ ಭಾವಕ್ಕಿಂತ ತನ್ನ 'ದುಂಬಿ ಗುಣದ' ಕಾರಣದಿಂದ ಶರಣಾಗಲು ಸಾಧ್ಯವಾಗುತ್ತಿಲ್ಲ ಎನ್ನುವ ವಿಷಾದವಿದೆ. ಹಾಗೆಯೇ ತನ್ನ ಮತ್ತು ದೈವದ ನಡುವೆ ಏರ್ಪಡುತ್ತಿರುವ ಕಂದರವನ್ನು ಆತಂಕ ಮತ್ತು ಆರ್ತ ಭಾವದಿಂದ ನಿವೇದಿಸಿಕೊಳ್ಳುತ್ತಿರುವಂತೆ ಕೂಡ ಈ ವಚನವನ್ನು ಗ್ರಹಿಸಲು ಸಾಧ್ಯವಿದೆ.

'ಉಳ್ಳವರು ಶಿವಾಲಯವ ಮಾಡುವರು' ಎನ್ನುವ ವಚನ ಮತ್ತು ಈ ವಚನ– ಇವೆರಡರಲ್ಲಿ ಮೇಲ್ನೋಟಕ್ಕೆ ಕಾಣುವ ವ್ಯತ್ಯಾಸ ಕೂಡ ಬೆರಗಾಗಿಸುವಂತದ್ದು.

ಮೊದಲನೆಯದರಲ್ಲಿ ದೇಹವು ದೇಗುಲವಾಗಬೇಕೆನ್ನುವ ತೀವ್ರ ಕಾತರವಿದ್ದರೆ, ಎರಡನೆಯದರಲ್ಲಿ ದೇಹವು ದೇಗುಲ ಆಗದೇನೋ ಎನ್ನುವ ಆತಂಕವಿದೆ. ಇದು ಬಸವಣ್ಣನ ಚಂಚಲ ಮನಸ್ಥಿತಿ ಮಾತ್ರವೇ ಅಲ್ಲ. ವಿಚಲಿತಗೊಂಡ ಮನಸ್ಥಿತಿಯೂ ಕೂಡ ಹೌದು.

ಈ ವಚನದ ಮುಂದುವರಿಕೆ ಎನ್ನುವಂತಿರುವ ಮತ್ತೊಂದು ರಚನೆಯನ್ನು ಗಮನಿಸಬಹುದು:

**ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ**
**ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ**
**ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯಾ ತಂದೆ**
**ನಿಮ್ಮ ಶರಣರ ಪಾದವಲ್ಲದೆ**
**ಅನ್ಯರ ವಿಷಯಕ್ಕೆಳಸದಂತೆ ಇರಿಸು**
**ಕೂಡಲ ಸಂಗಮ ದೇವಾ**

ಇದು ಬಸವಣ್ಣನ ಮತ್ತೊಂದು ದೇಹಕೇಂದ್ರಿತ ನಿವೇದನೆ. ಇಲ್ಲಿ ಇಂದ್ರಿಯಗಮ್ಯ ಅರಿವಿನ ಜಗತ್ತಿನಿಂದ ಮತ್ತು ವಿಷಯ ಸುಖಗಳ ಸೆಳೆತದಿಂದ ಪಾರಾಗಬಯಸುವ ಬಸವಣ್ಣನನ್ನು ಭಾವಿಸಿಕೊಳ್ಳಬಹುದು. ಸಾಮಾನ್ಯವಾಗಿ ಎಲ್ಲ ಭಕ್ತಕವಿಗಳಲ್ಲಿಯೂ ಈ ಗುಣವಿದೆ. ಅಧಿಕಾರ, ವರ್ಚಸ್ಸುಗಳಿಂದ ಹುಟ್ಟುವ ಅಹಂಕಾರ ಅಥವಾ ಅಂತರಂಗ ವಿಕಲತೆಯಿಂದ ಪಾರಾಗಲು ಹೆಳವತನ, ಕುರುಡುತನ ಹಾಗೂ ಕಿವುಡುತನಗಳನ್ನು ಬೇಡುವ ಬಸವಣ್ಣನ ಈ ಸ್ವಹಿಂಸೆಯ ಅಪೇಕ್ಷೆ ಗಾಬರಿ ಹುಟ್ಟಿಸುವಂತಿದೆ. ಹಾಗಾಗಿ ಶರಣರ ಮೊರೆ ಹೋಗುವುದೆಂದೇ ತನಗುಳಿದಿರುವ ಅಂತಿಮ ಆಯ್ಕೆ, ಶರಣರ ಸಾಂಗತ್ಯಬಲ ತನ್ನನ್ನು ನೈತಿಕ ದ್ವಂದ್ವಗಳಿಂದ ಪಾರು ಮಾಡಬಹುದು ಎಂದು ಬಸವಣ್ಣ ನಂಬಿಕೊಂಡಂತಿದೆ. ಜನರ ಸೌಖ್ಯಕ್ಕಾಗಿ ದುಡಿಯುವ ಎಲ್ಲರಿಗೂ ಇಂಥ ಸಂದಿಗ್ಧತೆಗಳು, ವಿಷಮ ಗಳಿಗೆಗಳು, ನೈತಿಕಸೂಕ್ಷ್ಮದ ಅಗ್ನಿದಿವ್ಯಗಳು ಇದ್ದೇ ಇರುತ್ತವೆ. ಆದರೆ ಎಲ್ಲರಿಗೂ ಬಸವಣ್ಣನ ಈ ಬಗೆಯ ಆತ್ಮಶೋಧದ ಗುಣ ಇದ್ದಿರಲಾರದು.

ಮನೋ ತಾಕಲಾಟಗಳನ್ನೇ ಮುಖ್ಯವಾಗಿಸಿಕೊಂಡ ಬಸವಣ್ಣನ ಮತ್ತೊಂದು ವಚನ:

**ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು**
**ನಿಂತಲ್ಲಿ ನಿಲ್ಲಲೀಯದೆನ್ನ ಮನವು**
**ಹೊಂದಿದಲ್ಲಿ ಹೊಂದಲೀಯದೆನ್ನ ಮನವು**
**ಕೂಡಲಸಂಗಮದೇವಾ, ನಿಮ್ಮ ಚರಣಕಮಲದಲ್ಲಿ**
**ಭ್ರಮರನಾಗಿಸು, ನಿಮ್ಮ ಧರ್ಮ**

ಈ ಮೊದಲು ವಿಶ್ಲೇಷಿಸಿದ 'ವಚನದಲ್ಲಿ ನಾಮಾಮೃತ ತುಂಬಿ'ಯಲ್ಲಿ ಅಸ್ಥಿರ ಮನಸ್ಥಿತಿಯ ದೈವ ಮತ್ತು ಭಕ್ತರಿಬ್ಬರನ್ನೂ ಪ್ರಾಣಿಪಾತಳಿಯಲ್ಲಿ ಅರ್ಥೈಸುವ ಪ್ರಯತ್ನವಿದೆ. ಈ ವಚನದಲ್ಲಿ ದೈವ ತನ್ನ ಭಾವಸ್ಥಿರತೆಯನ್ನು ಮರು ದಕ್ಕಿಸಿಕೊಂಡಂತಿದೆ. ಹಾಗಾಗಿ ದೈವಕ್ಕೆ ಇಲ್ಲಿ ಆಸರೆ ನೀಡುವ, ಉದ್ಧಾರಕನಾಗುವ ಅವಕಾಶ ಸಿಕ್ಕಿದೆ.

ಯಾವುದೇ ವ್ಯಕ್ತಿಯ ಮನೋಲಹರಿಯು ದುಂಬಿ ಅಥವಾ ಭ್ರಮರವಾಗುವ ಸ್ಥಿತಿಗೂ, ಅತೀವ ಮನೋಲಂಘನ ಗುಣದ ಮರ್ಕಟನಾಗುವುದಕ್ಕೂ ವ್ಯತ್ಯಾಸವಿದೆ. ತನ್ನ ಮನಸ್ಸು ಎಲ್ಲಿಯೂ ಏಕಾಗ್ರಗೊಳ್ಳದೆ ಹರಿದಾಡುವುದನ್ನು ಮರ್ಕಟನ ಚಾಂಚಲ್ಯಕ್ಕೆ ತುಂಬ ಸಂಕಟದಿಂದಲೇ ಸಮೀಕರಿಸಿಕೊಳ್ಳುವ ಬಸವಣ್ಣ ಆ ಮರ್ಕಟ ಮನಸ್ಥಿತಿಯನ್ನು ಕೊಡವಿಕೊಳ್ಳುವ ತುರ್ತಿನಲ್ಲಿದ್ದಾನೆ. ಅದರೆ ಮನುಷ್ಯನ ವ್ಯಕ್ತಿತ್ವದ ಸುಪ್ತ ಪಾತಳಿಯಲ್ಲಿ ಅಭಿನ್ನವಾಗಿ ಬೆರೆತು ಹೋಗಿರುವ ಈ ಬಗೆಯ ಪ್ರಾಣಿ ಪ್ರವೃತ್ತಿಯಿಂದ ಬಿಡುಗಡೆ ಅಷ್ಟು ಸುಲಭ ಸಾಧ್ಯವೇ? ಅದು ಬಸವಣ್ಣನಿಗೆ ಗೊತ್ತಿರುವುದರಿಂದಲೇ ಮರ್ಕಟತ್ವದ ಶಿಖರ ಚಂಚಲ ಸ್ಥಿತಿಯಿಂದ ಭ್ರಮರದ ಸೌಮ್ಯ ಚಂಚಲತೆಗೆ ಒಲವು ತೋರುತ್ತಿದ್ದಾನೆ. ಕೂಡಲಸಂಗನಲ್ಲಿ ಶರಣಾಗಲು ಅಷ್ಟು ಸಾಕು ಎನ್ನುವ ಭಾವನೆ ಬಸವಣ್ಣನಿಗೆ ಇದೆಯೆನಿಸುತ್ತದೆ. ಮುಖ್ಯವಾಗಿ ತನ್ನ ಆರಾಧ್ಯ ದೈವವನ್ನು ಕೂಡ ತಾನು ದುಂಬಿಯಾಗಿ ಪರಿಭಾವಿಸಿರುವುದರಿಂದ ಅದಕ್ಕಿಂತ ಹೆಚ್ಚಿನ ಔನ್ನತ್ಯದ ಅಭಿಲಾಷೆ ಉದ್ಧಟತನವಾಗಿಬಿಡುವ ಎಚ್ಚರವೂ ಇದ್ದಂತಿದೆ.

ಕೆಲವು ಪರಿಚಿತ ತಿಳಿವಿನ ವಿವರಗಳನ್ನು ಬಳಸುವ ಒಂದು ವಚನವನ್ನು ಪರಿಶೀಲಿಸುವುದರ ಮೂಲಕ ಬಸವಣ್ಣನ ಆತಂಕಗಳನ್ನು ಮತ್ತೊಮ್ಮೆ ಬಗೆದು ನೋಡಬಹುದು.

**ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ**
**ಜ್ಯೋತಿಯ ಬಲದಿಂದ ಅಂಧಕಾರದ ಕೇಡು ನೋಡಯ್ಯ**
**ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ**
**ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ**
**ಕೂಡಲ ಸಂಗನ ಶರಣರ ಬಲದಿಂದ ಆತ್ಮನ**
**ಅಹಂಕಾರದ ಕೇಡು ನೋಡಯ್ಯಾ ಕೂಡಲಸಂಗಮದೇವಾ**

ಜ್ಞಾನ, ಸಮರ್ಪಣೆ, ಸತ್ಯಗಳಿಗೆ ತನ್ನ ಬದುಕಿನಲ್ಲಿ ಆಳ ಒಡನಾಟವಿದ್ದಾಗಲೂ ಸ್ಥಾನ ಬಲವು ವ್ಯಕ್ತಿಯೊಬ್ಬನಲ್ಲಿ ಅಹಮಿಕೆಗೆ ಕಾರಣವಾಗುತ್ತದೆ. ಅಂತಹ ಅಹಮಿಕೆ ಅವನಲ್ಲಿನ ಹೊಸ ಸೇರ್ಪಡೆಯೇನಲ್ಲ. ಅದು ಅವನ ವ್ಯಕ್ತಿತ್ವದ ಸಹಜ ಭಾಗವಾಗಿಯೇ ಸಾಗಿ ಬಂದಿರುತ್ತದೆ. ಅದು ಹಿಗ್ಗಲಾರಂಭಿಸಿದರೆ ಸೂಕ್ಷ್ಮ ಸಂವೇದಿಯಾದವನಿಗೆ ತಕ್ಷಣ ಅದರ ಅಪಾಯದ ವಾಸನೆ ತಟ್ಟುತ್ತದೆ. ಆದರೆ ಅಧಿಕಾರ ಮತ್ತು ಸಂಪತ್ತಿನ ಸುಳಿಯ ಸೆಳೆತಕ್ಕೆ ಸಿಕ್ಕಿಕೊಂಡವನಲ್ಲಿ ಇಂತಹ ಎಚ್ಚರಗೊಳಿಸುವ ಸಂವೇದನೆಗಳು ಜಡಗೊಂಡಿರುತ್ತವೆ. ಹೀಗೆ ಅಹಂಕಾರ ಹಬ್ಬಿಕೊಂಡು ನೈತಿಕವಾಗಿ ದಿಕ್ಕೆಡುವ ಅಪಾಯ ಎದುರಾದ ಸಂದರ್ಭಗಳಲ್ಲಿ ಬಸವಣ್ಣ ಕೂಡಲಸಂಗನ ಮೊರೆ ಹೋಗುವ ಅಥವಾ ಆತ್ಮ ವಿಮರ್ಶೆ ಮಾಡಿಕೊಳ್ಳುವ ತನ್ನ ಎಂದಿನ ರೂಢಿಯ ಬದಲಾಗಿ ಶರಣರ ಚುಂಗಿನ ಹಿಂದೆ ಅಡಗಿ ನಿಲ್ಲುವ ಪ್ರವೃತ್ತಿಯನ್ನೂ ಆಗಾಗ ತೋರುತ್ತಾನೆ. ಬಹುಶಃ ಶರಣರೇ ಬಸವಣ್ಣನ ಬಲ ಮತ್ತು ದೌರ್ಬಲ್ಯವೆರಡೂ ಆಗಿದ್ದರಿಂದ ಹೀಗಾಗಿರಬಹುದು. ಹಾಗೆಯೇ ಬಸವಣ್ಣ ಎಂಬ ಸೂಕ್ಷ್ಮ ಮನಸ್ಸಿನ ಶರಣನಿಗೆ ತಾನು ಹೊತ್ತ ಹೊಣೆಗಳು ಹೆಣ ಭಾರವಾಗಿ ಕಾಡಿದ್ದರಿಂದ ಅಥವಾ ಅನೈತಿಕಗೊಳಿಸುವ ಆತಂಕ ಕಾಡಿದ್ದರಿಂದ

ನಿರ್ವಿಕಲ್ಪ ಶರಣತನಕ್ಕೇರುವ ಅಥವಾ ಅಂತಹ ಶರಣರಲ್ಲಿಗೆ ಧಾವಿಸಿಬರುವ ತುರ್ತು ಕಂಡಿರಬಹುದು. ಅಥವಾ ಆತನ ಆತ್ಮರಕ್ಷಣೆಯ ಹಲವು ಹುಡುಕಾಟಗಳಲ್ಲಿ ಇದೂ ಒಂದು ಆಗಿರಬಹುದು.

ಮೇಲಿನ ಎರಡರ ಜೊತೆಗೂಡುವ ಮತ್ತೊಂದು ವಚನ:

**ಜಜ್ಜನೆ ಜರಿದೆನು ಜಜ್ಜನೆ ಜರಿದೆ, ನೋಡಯ್ಯಾ**
**ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆ ನೋಡಯ್ಯಾ**
**ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆ,**
**ಕೂಡಲಸಂಗಮದೇವಾ ನಿಮ್ಮ ಶರಣರನಗಲಿದ ಕಾರಣ**

ಶರಣರಿಂದ ದೂರವಾದ ಯಾತನೆ ಮತ್ತು ಮರು ಸೇರ್ಪಡೆಯ ಧಾವಂತ ಅತ್ಯಂತ ತೀವ್ರ ಸ್ಥಿತಿಯಲ್ಲಿ ವ್ಯಕ್ತಗೊಳ್ಳುವ ವಚನವಿದು. ನೈತಿಕ ಸ್ಥೈರ್ಯಕ್ಕೆ ಸಾಧಕವಾಗುವ ನೆಲೆಯಲ್ಲಿ ಗ್ರಹೀತವಾಗುತ್ತಿದ್ದ ಶರಣರ ಸಾನಿಧ್ಯದ ಹಂಬಲ ಇಲ್ಲಿ ವಿರಹದ ನೆಲೆಗೆ ಏರಿರುವಂತೆ ಭಾಸವಾಗುತ್ತದೆ. ಆರಾಧ್ಯ ದೈವದ ಬಗೆಗಿನ ಸೆಳೆತವು ಅನುಷಂಗಿಕವಾಗಿ, ಶರಣರೇ ಅತ್ಯಂತಿಕ ಗಮ್ಯವಾಗಿಬಿಡುವ ಬಸವಣ್ಣನ ಮನಸ್ಥಿತಿಯನ್ನು ಇಲ್ಲಿ ಕಾಣಬಹುದು.

ಮೇಲಿನವುಗಳ ಜೊತೆಗೆ ಈ ವಚನವನ್ನು ಇಟ್ಟು ನೋಡಲು ಸಾಧ್ಯವಾದರೆ,

**ಇವನಾರವ ಇವನಾರವ**
**ಇವನಾರವನೆಂದೆನಿಸದಿರಯ್ಯಾ**
**ಇವ ನಮ್ಮವ ಇವ ನಮ್ಮವ**
**ಇವ ನಮ್ಮವನೆಂದೆನಿಸಯ್ಯಾ**
**ಕೂಡಲಸಂಗಮದೇವಾ,**
**ನಿಮ್ಮ ಮನೆಯ ಮಗನೆನಿಸಯ್ಯಾ**

ಆರಾಧ್ಯ ದೈವ ಮತ್ತು ಶರಣರಿಂದ ದೂರವಾಗುತ್ತಿರುವ ಆತಂಕಿತ ಮನಸ್ಥಿತಿಯಲ್ಲಿ ಹುಟ್ಟಿದ ವಚನವೆಂದು ಇದನ್ನು ಭಾವಿಸಿಕೊಳ್ಳಬಹುದು. ಹಾಗೆಯೇ ಶರಣರ ಹೊರತಾದ ತನ್ನ ಬದುಕೇ ಅರ್ಥಹೀನ ಎನ್ನುವಂತೆ ಯೋಚಿಸುವ ಬಸವಣ್ಣ ಯಾವ ಕಾರಣಕ್ಕೂ ತನ್ನನ್ನು ಅನ್ಯನೆಂಬಂತೆ ನೋಡದೆ ಮನೆಯ ಮಗನಂತೆ ಭಾವಿಸಬೇಕೆಂದು ಕೂಡಲಸಂಗನಲ್ಲಿ ಯಾಚಿಸುತ್ತಿದ್ದಾನೆ ಎನ್ನುವ ನೆಲೆಯಲ್ಲಿಯೂ ಇದನ್ನು ಅರ್ಥೈಸಬಹುದು. ಬಸವಣ್ಣನ ಅಸ್ತಿತ್ವದ ಮತ್ತು ಆತ್ಮಗೌರವದ ಉಳಿವಿನ ಹೋರಾಟದ ಭಾಗವಾಗಿಯೂ ಈ ವಚನವನ್ನು ಗಮನಿಸಲು ಸಾಧ್ಯವಿದೆ. ಹಾಗೆಯೇ ಸಂತೈಸಬೇಕಾದವರು, ಸಲಹಬೇಕಾದವರೇ ದೂರಸರಿದರೆ ಇನ್ನು ಯಾರ ಮೊರೆ ಹೋಗುವುದು ಎನ್ನುವ ನೈತಿಕ ಹೊಣೆಗಾರಿಕೆಯ ಪ್ರಶ್ನೆಯನ್ನು ಕೂಡ ಮುಂದಿಟ್ಟಂತೆ ತೋರುವ ಈ ವಚನವು ಬಸವಣ್ಣನ ವಿಷಾದಕರ ಅಧ್ಯಾಯವೊಂದನ್ನು ತೆರೆದಿಟ್ಟಂತೆನಿಸುತ್ತದೆ.

ಬಸವಣ್ಣನ ತುಂಬಾ ಮಹತ್ವದ ವಚನವೊಂದನ್ನು ಇಲ್ಲಿ ವಿವರಿಸಿಕೊಳ್ಳಲು

ಯತ್ನಿಸುತ್ತೇನೆ.

**ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೆ**
**ಧರೆ ಹತ್ತಿಯುರಿದೊಡೆ ನಿಲಬಾರದು**
**ಏರಿ ನೀರುಣ್ಬೊಡೆ, ಬೇಲಿ ಕೆಯ್ಯೆಮೇವೊಡೆ**
**ನಾರಿ ತನ್ನ ಮನೆಯಲ್ಲಿ ಕಳುವೊಡೆ**
**ತಾಯ ಮೊಲೆವಾಲು ನಂಜಾಗಿ ಕೊಲುವೊಡೆ**
**ಇನ್ನಾರಿಗೆ ದೂರುವೆ ಕೂಡಲ ಸಂಗಮ ದೇವಾ?**

ಪರಸ್ಪರ ಅವಲಂಬನೆ ಮತ್ತು ನಂಬಿಕೆಯ ನೆಲೆಯಲ್ಲಿ ರೂಪುಗೊಂಡಿರುವ ಲೋಕಸಂಬಂಧಗಳಲ್ಲಿನ ಯಾವುದೇ ಪಲ್ಲಟ ಮತ್ತು ಅಲ್ಲಿ ಉಂಟಾಗುವ ಯಾವುದೇ ಕ್ಷೋಭೆ ಆ ವ್ಯವಸ್ಥೆಯ ನೈತಿಕ ಸ್ಥೈರ್ಯವನ್ನು ಉಡುಗಿಸಿಬಿಡುತ್ತದೆ ಎಂದು ಬಸವಣ್ಣನ ಆತಂಕಪಡುತ್ತಿದ್ದಾನೆ ಎನ್ನುವಂತೆ ಈ ವಚನವನ್ನು ಗ್ರಹಿಸಲಾಗುತ್ತಿದೆ. ಇದು ಸರ್ವಸ್ವೀಕೃತ ಗ್ರಹಿಕೆಯೂ ಆಗಿರುವಂತಿದೆ. ಇಂತಹುದನ್ನು ನಿರಾಕರಿಸುವ ಉಪದ್ವ್ಯಾಪಕ್ಕೆ ಹೋಗದೆ ಈ ವಚನಕ್ಕಿರಬಹುದಾದ ಇನ್ನಿತರ ಸಾಧ್ಯತೆಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಬಹುದು.

ಮೊದಲ ಸಾಲಿನಲ್ಲಿ ಬೆಚ್ಚನೆಯ ಹಿತಾನುಭವವನ್ನು ಕುರಿತು ಮಾತಾಡುವ ಬಸವಣ್ಣ ಒಮ್ಮಿಂದೊಮ್ಮೆಲೆ ತೀವ್ರ ತಲ್ಲಣಕ್ಕೆ ಸಿಕ್ಕಿಕೊಂಡವನಂತೆ ಮಾತಾಡತೊಡಗುತ್ತಾನೆ. ಬಸವಣ್ಣನ ಮನಸ್ಸಿನಲ್ಲಿ ಹುಟ್ಟುವ ಈ ಹಠಾತ್ ಕ್ಷೋಭೆಯು ಲೋಕ ಸಂಸಾರದಲ್ಲಿನ ಸಂಬಂಧಗಳ ವಿಘಟನೆಯನ್ನು, ಛಿದ್ರತೆಯನ್ನು ಕುರಿತ ವಿಶಾಲ ವ್ಯಾಪ್ತಿಯದ್ದೇ ಅಥವಾ ತನ್ನ ಮತ್ತು ಬಿಜ್ಜಳನ ಮಧ್ಯೆ ಶಿಥಿಲಗೊಂಡಿದ್ದ ಸಂಬಂಧವನ್ನು ಕುರಿತದ್ದೇ, ಹಾದಿ ಮಧ್ಯೆಯೇ ಕುಸಿದು ಬೀಳುತ್ತಿದ್ದ ತನ್ನ ಕ್ರಾಂತಿಯ ಕನಸುಗಳನ್ನು ಕುರಿತದ್ದೇ ಎನ್ನುವ ನಿಟ್ಟಿನಲ್ಲಿಯೂ ಯೋಚಿಸಬಹುದು. ಉದಾತ್ತ ಅರ್ಥದಲ್ಲಿ ಬಸವಣ್ಣ ಸಂತನೇ ಆಗಿರಬಹುದು. ಆದರೆ ಆತ ಲೌಕಿಕಕ್ಕೆ ಅಂಟಿಕೊಂಡೇ ತನ್ನ ಸುತ್ತಲ ಜಗತ್ತಿನ ಜೀವಗಳಿಗಾಗಿ ಸೆಣಸಾಡಿದವನು. ಆದ್ದರಿಂದ ಈ ವಚನದಲ್ಲಿನ ಬಸವಣ್ಣನ ಕನವರಿಕೆ, ನಿಟ್ಟುಸಿರು ಮತ್ತು ಹತಾಶೆಗಳನ್ನು ತುಂಬಾ ಸಹಾನುಭೂತಿಯಿಂದ ಆಲಿಸುವುದು ಅಗತ್ಯ.

ಬಸವಣ್ಣನ ಸಂದಿಗ್ಧತೆಯನ್ನು ಕಟ್ಟಿಕೊಡುವ ಒಂದು ವಚನವನ್ನು ಇಲ್ಲಿ ಗಮನಿಸಬಹುದು.

**ಹಬ್ಬಕ್ಕೆ ತಂದ ಹರಕೆಯ ಕುರಿ**
**ತೋರಣಕ್ಕೆ ತಂದ ತಳಿರ ಮೇಯಿತ್ತು**
**ಕೊಂದಹರೆಂಬುದನರಿಯದೆ**
**ಬೆಂದೊಡಲ ಹೊರೆಯ ಹೋಯಿತ್ತು**
**ಅಂದಂದೆ ಹುಟ್ಟಿತ್ತು ಅಂದಂದೆ ಹೊಂದಿತ್ತು**
**ಕೊಂದವರುಳಿದರೆ ಕೂಡಲಸಂಗಮದೇವಾ**

ಹಬ್ಬದ ದಿನ ಹರಕೆಯ ಬಲಿ ಕೊಡಲೆಂದು ತಂದ ಕುರಿಗೆ ತನ್ನ ಸಾವಿನ

ಮುನ್ಸೂಚನೆಯಿಲ್ಲ. ಅದು ಮುಗ್ಧವಾಗಿ ತನ್ನನ್ನು ಬಲಿ ಕೊಡಲಿಕ್ಕೆಂದೇ ಸಿಂಗರಿಸಿದ ಆ ಮನೆಯ ತೋರಣದ ತಳಿರನ್ನು ಮೇಯುತ್ತದೆ. ಅದಕ್ಕೆ ಆ ಕ್ಷಣದ ಹಸಿವನ್ನು ನೀಗಿಸಿಕೊಳ್ಳುವುದಷ್ಟೇ ಮುಖ್ಯವಾಗಿರುತ್ತದೆ. ಆ ಕುರಿಗೆ ದೇವರಿಂದ ಹುಟ್ಟಿನ ಪ್ರಾಪ್ತಿಯಿತ್ತು. ಮನುಷ್ಯರಿಂದ ಸಾವು ದಕ್ಕಿತು. ಅದರ ಬದುಕಿನ ಅಧ್ಯಾಯವೇನೋ ಮುಗಿಯಿತು. ಆದರೆ ಅದನ್ನು ಕೊಂದವರು ಮತ್ತು ತಿಂದವರು ಉಳಿಯುತ್ತಾರೆಯೇ? ಲೋಕದಲ್ಲಿ ಎಲ್ಲವೂ, ಎಲ್ಲರೂ ಅಶಾಶ್ವತವಲ್ಲವೇ? ಅಂದ ಮೇಲೆ ತಾವು ಮಾತ್ರ ಶಾಶ್ವತವೆನ್ನುವ ಹಾಗೆ ಅಸಹಾಯಕರ ಬಗೆಗೆ ತೋರುವ ಈ ಬಗೆಯ ಕ್ರೌರ್ಯ ಮತ್ತು ಹಿಂಸಾಪ್ರವೃತ್ತಿಗಳು ನಿಂದನೀಯವಲ್ಲವೇ ಎನ್ನುವ ನೈತಿಕ ಪ್ರಶ್ನೆಯನ್ನು ಬಸವಣ್ಣ ನಮ್ಮ ಮುಂದಿಡುತ್ತಾನೆ. ನಾವೆಲ್ಲರೂ ಹಾಗೆಯೇ ಇಡೀ ವಚನವನ್ನು ವ್ಯಾಖ್ಯಾನಿಸಿದ್ದೇವೆ.

ಜೀವ ಹಿಂಸೆಯನ್ನು ವಿರೋಧಿಸುವ ಬಸವಣ್ಣನ ಆಶಯ ಉದಾತ್ತವಾದುದು ಸರಿ. ಅದರ ಬಗೆಗಿನ ಬಸವಣ್ಣನ ಬದ್ಧತೆಯನ್ನು ಪ್ರಶ್ನಿಸಲು ಸಾಧ್ಯವೇ ಇಲ್ಲ. ಆದರೆ ಆರಾಧನೆ ಮತ್ತು ಆಹಾರದ ಆಯ್ಕೆಗಳನ್ನು ಕುರಿತ ಇಂತಹ ಚಿಂತನೆಗಳು ಸಮಾಜದ ಬಹುಸಂಖ್ಯೆಯ ಜನರ ಜೀವನ ಕ್ರಮವನ್ನು ಅಲ್ಲಗಳೆಯುವಂತದ್ದಲ್ಲವೇ ಎನ್ನುವ ಪ್ರಶ್ನೆಗೂ ದಾರಿ ಮಾಡುತ್ತವೆ ಎನ್ನುವುದನ್ನೂ ತುಸು ಗಮನಿಸಬೇಕಾಗುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಶ್ರೀನಿವಾಸಮೂರ್ತಿ ಎಂ.ಆರ್., (1968), ವಚನ ಧರ್ಮಸಾರ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
2. ಬಸವರಾಜು ಎಲ್. (ಸಂ), (2000), ಬಸವಣ್ಣನವರ ವಚನಗಳು, ಮೈಸೂರು: ಗೀತಾ ಬುಕ್ ಹೌಸ್.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.